ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ


ಸಂಪುಟ-5, ಸಂಚಿಕೆ-4 ತ್ರೈಮಾಸಿಕ, ಅಕ್ಟೋಬರ್ - ಡಿಸೆಂಬರ್ 2018 ಪುಟಗಳು-12

## ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು



ದಿನಾಂಕ 14-09-2018 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರ ಸಮ್ಮುಖದಲ್ಲಿ ಬೆವಿಕಂನ ಸೌರಶಕ್ತಿ ಮೇಲ್ಛಾವಣಿ ಪಿವಿ ವ್ಯವಸ್ಥೆಯ ಸರಳೀಕೃತ ಅರ್ಜಿಗಳ (ಹೊಸ ಆನ್ ಲೈನ್ ಅರ್ಜಿ) ಕಾಲಬದ್ಧ ವಿಲೇವಾರಿಯ ಸೌಲಭ್ಯವನ್ನು ಅನಾವರಣಗೊಳಿಸಲಾಯಿತು.





# Message from Managing Director



The essential purpose of BESCOM Snehi magazine is to inform, engage and inspire a diverse leadership regarding the happenings in the company and giving opportunity to our staff to showcase their writing talent.

This year too the company has taken up several initiatives in the interest of consumers.

New online rooftop application was launched by Hon'ble Chief Minister of Karnataka to promote green energy. This online application has been developed in-house by BESCOM engineers for the benefit of consumers and to make the entire process of applying simple and user friendly.

Encouraging steps are also taken to promote electric vehicles in the state.

The season of festivities has arrived. A time for celebration, a time for victory of good over bad. Let us continue the same 'true' spirit. Let us come together to work towards making BESCOM number one electricity distribution company in the country!

I would like to wish everyone a Very Happy Deepavali.

**C. Shikha**
Managing Director
BESCOM

# ಸಂಪಾದಕೀಯ



ಆತ್ಮೀಯರೆ,

ಈ ಬಾರಿ ಜೂನ್ ತಿಂಗಳಿನಲ್ಲಿಯೇ ಮುಂಗಾರು ಮಳೆ ಆಶಾದಾಯಕವಾಗಿ ಎಲ್ಲೆಡೆ ಭರವಸೆ ಮೂಡಿಸಿತ್ತು. ಅದರಂತೆ ಹವಾಮಾನ ಇಲಾಖೆಯವರೂ ಉತ್ತಮ ಮುಂಗಾರಿನ ಬಗ್ಗೆ ಮುನ್ಸೂಚನೆ ನೀಡಿದ್ದರು. ಆದರೂ ಕೂಡ ನಮ್ಮಲ್ಲಿ ವಾಡಿಕೆಯ ಮಾತೊಂದು ಇದೆ. "ಭಾರತದಲ್ಲಿ ಕೃಷಿ ಚಟುವಟಿಕೆ ಎಂದರೆ ಅದು ಮುಂಗಾರು ಮಳೆಯೊಂದಿಗಿನ ಜೂಜಾಟ". ಈ ಮಾತು ಇತ್ತೀಚಿನ ವರ್ಷಗಳಲ್ಲಿ ಸಹಜವೂ ಆಗಿದೆ.

ಮಳೆ ಬಂದರೆ ಅತಿವೃಷ್ಟಿ ಇಲ್ಲವೇ ಅನಾವೃಷ್ಟಿ. ಕಳೆದ ಕೆಲವು ವರ್ಷಗಳಿಂದ ಮಳೆ ಇಲ್ಲದೆ ಬರಗಾಲದಿಂದ ತತ್ತರಿಸಿ ಹೋಗಿದ್ದ ರಾಜ್ಯದ ಹಲವು ಭಾಗಗಳು ಈ ಬಾರಿ ಸುರಿದ ಭಾರೀ ಮಳೆಯಿಂದ 'ಜಲ ಪ್ರಳಯ'ವನ್ನೇ ನೋಡಿ, ಅನುಭವಿಸಿ ಆತಂಕಕ್ಕೀಡಾಗುವಂತಾಗಿದೆ.

ಮಳೆಯಿಂದ ಬೆಳೆಯ ಸಮೃದ್ಧಿಯ ಕನಸು ಕಂಡಿದ್ದ ಬಹುತೇಕ ಭಾಗದ ಜನರು ಮನೆ-ಮಠ, ಹೊಲ-ಗದ್ದೆಗಳನ್ನು ಕಳೆದುಕೊಂಡು ಪರಿತಪಿಸುವಂತಾಗಿದೆ.

ಆದರೆ "ಬೆಸ್ಕಾಂ" ವ್ಯಾಪ್ತಿಯ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಸಹಜ ಸ್ಥಿತಿಗೆ ಮರಳಿದ್ದು, ಬೆಂಗಳೂರು ನಗರದಲ್ಲಿ ಸ್ವಲ್ಪ ಮಟ್ಟಿನ ಮಳೆಯಾಗಿದೆ. ಇದರಿಂದ ವಿದ್ಯುತ್ ಸರಬರಾಜಿನ ಮೇಲೆ ಪ್ರತಿಕೂಲ ಪರಿಣಾಮ ಅಷ್ಟಾಗಿ ಆಗಿಲ್ಲ. ಆದರೂ ಕೆಲವೆಡೆ ದೊಡ್ಡ ದೊಡ್ಡ ಮರಗಳು ಬೀಳುವ ಸಂದರ್ಭಗಳಲ್ಲಿ ಅನೇಕ ವಿದ್ಯುತ್ ಕಂಬಗಳು ಹಾಗೂ ತಂತಿಗಳು ಬಿದ್ದು ಸರಬರಾಜು ಸ್ಥಗಿತಗೊಂಡು ಸಾಕಷ್ಟು ಹಾನಿಯೂ ಆಗಿರುತ್ತದೆ.

ಇಂತಹ ಸಂದರ್ಭಗಳಲ್ಲಿ "ಬೆಸ್ಕಾಂ" ಸಿಬ್ಬಂದಿ ಮತ್ತು ಅಧಿಕಾರಿಗಳು ಸಕಾಲದಲ್ಲಿ ವ್ಯತ್ಯಯವನ್ನು ಸರಿಪಡಿಸಿ ಬಳಕೆದಾರರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಿರುವುದು ಅಭಿನಂದನಾರ್ಹವಾಗಿದೆ. ಹಾಗೆಂದು ನಾವು ಕೈಕಟ್ಟಿ ಕೂರಲು ಆಗುವುದಿಲ್ಲ. ಕೆಲವೊಮ್ಮೆ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಮಳೆ ಬೀಳುವ ಸಂದರ್ಭಗಳೂ ಇವೆ, ಹಿಂದಿನ ವರ್ಷಗಳ ಮಳೆ ಪ್ರಮಾಣ ಗಮನಿಸಿದರೆ ಹಿಂಗಾರು ಮಳೆ ಅಥವಾ ವಾಯುಭಾರ ಕುಸಿತದಿಂದ ಬೀಳುವ ಮಳೆ ಅನಾಹುತಗಳನ್ನು ಸೃಷ್ಟಿಸಿರುವುದೂ ಇದೆ.

ಅಂತಹ ಯಾವುದೇ ಸನ್ನಿವೇಶ ಮುಂದೆ ಎದುರಾದರೆ ಅದನ್ನು ಎದುರಿಸಲು ನಾವು ಸನ್ನದ್ಧರಾಗಿರಬೇಕು. ಗ್ರಾಹಕರ ದೂರುಗಳನ್ನು ಆಧರಿಸಿ ಸಮಸ್ಯೆಗಳಿಗೆ ಸೂಕ್ತ ಪರಿಹಾರ ದೊರಕಿಸುವುದನ್ನು ಸವಾಲಾಗಿ ಸ್ವೀಕರಿಸಿ ವಿಪತ್ತನ್ನು ಎದುರಿಸಬೇಕು.

ಜಲವಿದ್ಯುತ್ ಪೂರೈಸುವ ಎಲ್ಲ ಜಲಾಶಯಗಳೂ ಈ ಬಾರಿ ಭರ್ತಿಯಾಗಿರುವುದು ವಿದ್ಯುತ್ ಉತ್ಪಾದನೆ ಬಗ್ಗೆ ಆಶಾದಾಯಕ ಪರಿಸ್ಥಿತಿ ನಿರ್ಮಾಣವಾಗಲು ಕಾರಣವಾಗಿದೆ. ಇದರಿಂದ ಮುಂದೆ ವಿದ್ಯುತ್ ಸಮೃದ್ಧಿಯ ದಿನಗಳು ಬರಲಿ ಎಂದು ಆಶಿಸೋಣ.

ತಮ್ಮೆಲ್ಲರಿಗೂ ದಸರಾ, ದೀಪಾವಳಿ ಹಬ್ಬಗಳ ಜತೆಗೆ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು(ಗ್ರಾ. ಸಂ), ಬೆಸ್ಕಾಂ

# ನಮ್ಮ ಊರು, ನಮ್ಮ ಜಿಲ್ಲೆ – ಕೊಡಗು



ಕರ್ನಾಟಕದ ಪುಟ್ಟ ಜಿಲ್ಲೆಯಾದರೂ ನಿಸರ್ಗ ಸೌಂದರ್ಯಕ್ಕೆ ಹೆಸರಾದ ನಾಡು ಕೊಡಗು ಜಿಲ್ಲೆ.

ಮೂರು ತಾಲ್ಲೂಕುಗಳು ಹಾಗೂ ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಜಿಲ್ಲೆಯ ಜನಸಂಖ್ಯೆ ಸುಮಾರು ಐದೂವರೆ ಲಕ್ಷ.

ಜೀವನದಿ ಕಾವೇರಿಯ ಉಗಮಸ್ಥಳ ತಲಕಾವೇರಿ ಈ ಜಿಲ್ಲೆಯಲ್ಲಿರುವ ಪುಣ್ಯಕ್ಷೇತ್ರಗಳಲ್ಲಿ ಒಂದು.

'ನಡೆದು ನೋಡಾ ಕೊಡಗಿನ ಬೆಡಗಾ' ಎಂಬ ಕವಿವಾಣಿಯಂತೆ ಕೊಡಗಿನ ನೈಜ ಸೌಂದರ್ಯ ಸವಿಯಲು ಪ್ರವಾಸಿಗರು ಹಲವು ಕಡೆ ಕಾಲ್ನಡಿಗೆಯಲ್ಲಿಯೇ ಸಾಗಬೇಕು. ಹೀಗೆ ಸುತ್ತಾಡಿದಾಗ ಎಲ್ಲೆಡೆ ಕಾಣಸಿಗುವ ಕಾಫಿ, ಕಿತ್ತಲೆ, ಏಲಕ್ಕಿಯ ತೋಟಗಳು, ನದಿ–ತೊರೆಗಳು, ಜಲಧಾರೆಗಳು, ಗಿರಿ–ಕಂದರಗಳು, ಮಂಜು ಮುಸುಕಿದ ಆಹ್ಲಾದಕರ ನಿಸರ್ಗದ ಸೌಂದರ್ಯಕ್ಕೆ ಮಾರು ಹೋಗದವರೇ ಇಲ್ಲ. ಹಾಗಾಗಿ ಇದನ್ನು ದಕ್ಷಿಣದ ಕಾಶ್ಮೀರ ಎಂದೂ ಕರೆಯುತ್ತಾರೆ.

ಒಂದೇ ಜಿಲ್ಲೆಯಲ್ಲಿ ಹಲವು ವೈವಿಧ್ಯಮಯ ಪ್ರವಾಸಿ ತಾಣಗಳಿರುವ ನಾಡು ಕೊಡಗು. ಕಾವೇರಿ ಉಗಮ ಸ್ಥಳದ ಜತೆಗೆ ತ್ರಿವೇಣಿ ಸಂಗಮವಾದ ಭಾಗಮಂಡಲ, ಪಾಡಿಇಗ್ಗುತಪ್ಪ, ಎಮ್ಮೆಮಾಡು ಗ್ರಾಮದಲ್ಲಿರುವ ಮುಸ್ಲಿಂ ಧಾರ್ಮಿಕ ಕ್ಷೇತ್ರ, ವಿರಾಜಪೇಟೆಯಲ್ಲಿರುವ ನೂರಾರು ವರ್ಷಗಳ ಇತಿಹಾಸ ಹೊಂದಿರುವ ಸಂತ ಅನ್ನಮ್ಮ ಚರ್ಚ್, ಮಡಿಕೇರಿಯಲ್ಲಿರುವ ಓಂಕಾರೇಶ್ವರ ದೇವಾಲಯ ಇತ್ಯಾದಿ ಸ್ಥಳಗಳು ಧಾರ್ಮಿಕ ಕೇಂದ್ರಗಳಾಗಿ ಹೆಸರಾಗಿವೆ.

ಜಲಪಾತಗಳು ಕೊಡಗಿನ ಯಾವುದೇ ಮಾರ್ಗದಲ್ಲಿ ತೆರಳಿದರೂ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಮಡಿಕೇರಿ ಬಳಿಯ ಅಬ್ಬಿ ಫಾಲ್ಸ್, ನಾಪೋಕ್ಲು ಬಳಿಯ ಚೇಲಾವರ ಫಾಲ್ಸ್, ಶ್ರೀಮಂಗಲ ಬಳಿಯ ಇರ್ಪು ಜಲಪಾತ, ಸೋಮವಾರಪೇಟೆ ಬಳಿಯ ಮಲ್ಲಳ್ಳಿ ಫಾಲ್ಸ್, ಮಾದಾಪುರ ಸಮೀಪದ ಸೂರ್ಲಬ್ಬಿ ಫಾಲ್ಸ್ ಹೀಗೆ ಕೊಡಗಿನಲ್ಲಿ ವರ್ಷಪೂರ್ತಿ ಇರುವ ಜಲಧಾರೆಗಳು ಹತ್ತಿಪ್ಪತ್ತಾದರೆ, ಮಳೆಗಾಲದಲ್ಲಿ ಕಂಗೊಳಿಸುವ ಜಲಧಾರೆಗಳು ನೂರಾರು. ಇವುಗಳನ್ನು ಜಲಧಾರೆಗಳ ಪ್ರವಾಸೋದ್ಯಮ ಎಂದೂ ಹೇಳಬಹುದು.

ನಿಸರ್ಗ ರಮಣೀಯ ಕೊಡಗಿನಲ್ಲಿ ಎತ್ತ ನೋಡಿದರತ್ತ ಹಸಿರಿನ ಬೆಡಗು.. ರಾಜಾಸೀಟ್ ಎಂಬ ಮಡಿಕೇರಿಯ ಸುಂದರ ಉದ್ಯಾನವನದಲ್ಲಿ ನಿಂತು ನೋಡಿದರೆ ಇದೇ ಭೂಮಿಯ ಮೇಲಿನ ಸ್ವರ್ಗ ಎಂದು ಭಾವಿಸಿದರೆ ಖಂಡಿತಾ ಅದು ಭ್ರಮೆಯಲ್ಲ ... ಹೊಲ ಗದ್ದೆಗಳನ್ನು ಮಧ್ಯೆ ಹೊಂದಿರುವ ಭೂದೇವಿಯ ಸೌಂದರ್ಯ ಸವಿಯಲು ಕಣ್ಣೆರಡೇ ಸಾಕೆ... ಕವಿಗಳು ವರ್ಣಿಸಿದ್ದು ಅವರ ಮೊದಲ ನೋಟಕ್ಕೆ ನಿಲುಕಿದ್ದಿರಬೇಕು. ಕೊಡಗಿನಲ್ಲಿ ಸುತ್ತಾಡಿ ನಿಸರ್ಗ ಸವಿಯನ್ನು ಸವಿದರೆ ಖಂಡಿತವಾಗಿಯೂ ಇಲ್ಲಿನ ಬೆಡಗನ್ನು ವರ್ಣಿಸಲು ಪದಗಳೇ ಸಾಲದು. ಕುಶಾಲನಗರ ಬಳಿಯಿರುವ ನಿಸರ್ಗಧಾಮ ಕೃತಕವಾಗಿ ರೂಪಿಸಲ್ಪಟ್ಟ ನಿಸರ್ಗವೇ ಆಗಿದ್ದರೂ 3 ಗಂಟೆಗಳ ಸಂದರ್ಶನಕ್ಕೆ ಸೂಕ್ತ. ಜಿಂಕೆವನ, ದೋಣಿ ವಿಹಾರದ ಜೊತೆಗೆ ಕಾಡಿನ ಅನುಭವ ಮೂಡಿಸುವ ಈ ತಾಣ ಹೆಸರೇ ಸೂಚಿಸುವಂತೆ ನಿಸರ್ಗದಧಾಮ. ಮಾದಾಪುರ ಬಳಿಯಿರುವ ಮಕ್ಕಳ ಗುಡಿ ಬೆಟ್ಟದಿಂದ ನೋಡಿದರೆ ಪ್ರಕೃತಿಯ ವಿಹಂಗಮ ನೋಟ ಅವಿಸ್ಮರಣೀಯ.. ಜಿಲ್ಲೆಯ ಅಲ್ಲಲ್ಲಿ ಕಂಡುಬರುವ ಪ್ರಕೃತಿ ವೈಭವ, ಪ್ರಕೃತಿ ಸೌಂದರ್ಯದ ಪ್ರವಾಸಕ್ಕೆ ಉದಾಹರಣೆಗಳು.

ನಾಗರಹೊಳೆ ದೇಶದಲ್ಲಿಯೇ ಹೆಸರುವಾಸಿಯಾದ ರಾಷ್ಟ್ರೀಯ ಅಭಯಾರಣ್ಯ. ದಿವಂಗತ ರಾಜೀವ್‌ಗಾಂಧಿ ಹೆಸರನ್ನು ಹೊಂದಿರುವ ನಾಗರಹೊಳೆಯಲ್ಲಿ ವನ್ಯಜೀವಿಗಳನ್ನು ನೋಡುವುದೇ ಒಂದು ಅಪೂರ್ವ ಅನುಭವ. ಕಾಡಿನ ನಡುವೆ ಅರಣ್ಯ ಇಲಾಖೆಯ ವಾಹನದಲ್ಲಿ ಸಾಗುತ್ತಾ ತಮ್ಮ ಪಾಡಿಗೆ ತಾವಿರುವ ಆನೆ, ಕಾಡೆಮ್ಮೆ, ಹುಲಿ, ಚಿರತೆ, ಜಿಂಕೆ, ನವಿಲು ಮತ್ತಿತರ ವನ್ಯಜೀವಿಗಳ ದರ್ಶನ ಪ್ರವಾಸಿಗರ ಪಾಲಿಗೆ ಮಜ ನೀಡುವಂಥದ್ದು.

ಜಿಲ್ಲೆಯ ಅತ್ಯಂತ ಎತ್ತರದ ಶಿಖರ ತಡಿಯಂಡಮೋಳ್, ಪುಷ್ಪಗಿರಿ, ಕೋಟೆಬೆಟ್ಟ, ನಿಶಾನೆ ಮೊಟ್ಟೆಯಂಥವು ಚಾರಣಿಗರಿಗೆ ಸವಾಲೆಸೆಯುವುದು ಮಾತ್ರವಲ್ಲ, ಇಲ್ಲಿ ಹೆಜ್ಜೆ ಹಾಕಿದವರು ಗಿರಿಗಳ ಬೆಡಗಿಗೆ ಮರುಳಾಗಿ ಕೊಡಗಿನ ಸೌಂದರ್ಯೋಪಾಸಕರಾಗಿ ಬಿಡುತ್ತಾರೆ. ಕೊಡಗಿನ ಗಿರಿಗಳಲ್ಲಿ ಕಾಲ್ನಡಿಗೆ ಸವಾರಿ ಮಾಡಲೆಂದೇ ಸಾವಿರಾರು ಸಂಖ್ಯೆಯಲ್ಲಿ ದೇಶ ವಿದೇಶಗಳಿಂದ ಚಾರಣಿಗರು ಬರುತ್ತಿದ್ದಾರೆ.

ಮಡಿಕೇರಿಯಲ್ಲಿನ ರಾಜರ ಗದ್ದುಗೆ, ಓಂಕಾರೇಶ್ವರ ದೇವಾಲಯ, ಕೋಟೆಯಲ್ಲಿನ ಅರಮನೆ, ಕಲ್ಲಿನ ಆನೆಗಳು, ಸರ್ಕಾರಿ ವಸ್ತು ಸಂಗ್ರಹಾಲಯ, ನಾಪೋಕ್ಲು ಬಳಿಯ ನಾಲ್ಕು ನಾಡು ಅರಮನೆ, ಸೋಮವಾರ ಪೇಟೆ ತಾಲ್ಲೂಕಿನಲ್ಲಿರುವ ಹೊನ್ನಮ್ಮನ ಕೆರೆ, ಜೈನ ಬಸದಿಗಳು, ಕೊಡಗಿಗೆ ಬರುವ ಪ್ರವಾಸಿಗರಿಗೆ ಐತಿಹಾಸಿಕ ಮಾಹಿತಿ ನೀಡುವಲ್ಲಿ ಸಫಲವಾಗುತ್ತದೆ. ರಾಜರಾಳಿದ ಕೊಡಗಿನ ಗತಕಾಲದ ನೆನಪುಗಳನ್ನು ಇವುಗಳು ಬಿಂಬಿಸುತ್ತವೆ. ಐತಿಹಾಸಿಕ



ತಾಣಗಳ ಪಾರಂಪರಿಕ ಸ್ಥಳಗಳ ಪ್ರವಾಸೋದ್ಯಮ ಈ ಮೂಲಕ ಸಾಕಾರಗೊಳ್ಳುತ್ತದೆ. ಚೆಟ್ಟಳ್ಳಿಯ ರಾಷ್ಟ್ರೀಯ ತೋಟಗಾರಿಕಾ ಸಂಶೋಧನಾ ಕೇಂದ್ರ, ಕಾಫಿ ಸಂಶೋಧನಾ ಕೇಂದ್ರಗಳು, ಕೃಷಿ, ಹಣ್ಣಿನ ಬೆಳೆಗಳ ಕುರಿತಾದ ಸಂಶೋಧನೆ ಮಾಡುವ ಸ್ಥಳಗಳಾಗಿ ಆಸಕ್ತ ಸಂದರ್ಶಕರನ್ನು ತಮ್ಮತ್ತ ಸೆಳೆಯುತ್ತಿವೆ. ಕಾವೇರಿ, ಲಕ್ಷ್ಮಣತೀರ್ಥ, ಹಾರಂಗಿ ನದಿಗಳು. ಕೊಡಗಿನಲ್ಲಿ ಹಾದು ಹೋಗುವ ಕಾವೇರಿ ನದಿ ತೀರಗಳಲ್ಲಿನ ಪ್ರವಾಸಿ ತಾಣಗಳು ಜಲಕ್ರೀಡೆಯಾಡುವವರಿಗೆ ಸೂಕ್ತ ತಾಣವಾಗಿವೆ. ದುಬಾರೆ, ನಿಸರ್ಗಧಾಮ, ಹಾರಂಗಿ, ವಿರಾಜಪೇಟೆ ತಾಲ್ಲೂಕಿನ ಲಕ್ಷ್ಮಣತೀರ್ಥ ನದಿಗಳು ಸಂದರ್ಶಕರಿಗೆ ಜಲವೈಭವರಸ ಬುತ್ತಿಯನ್ನು ಉಣಬಡಿಸುತ್ತವೆ.

ಇಂತಹ ಸುಂದರವಾದ ಕೊಡಗು ಜಿಲ್ಲೆ ಈ ಬಾರಿ ಕಂಡು ಕೇಳರಿಯದಂತಹ ಪ್ರಕೃತಿ ವಿಕೋಪಕ್ಕೆ ತುತ್ತಾಗಿ ನಲುಗಿ ಹೋಗಿದೆ. ಮಹಾಮಳೆ, ಭೂಕುಸಿತಕ್ಕೆ ಸಿಲುಕಿ ಜಿಲ್ಲೆಯ ಹಲವು ಭಾಗಗಳು ನಾಮಾವಶೇಷವಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ.

'ಪ್ರವಾಸಿಗರ ಸ್ವರ್ಗ' ಎಂದು ಕರೆಸಿಕೊಳ್ಳುವ ಕೊಡಗಿನಲ್ಲಿ ಸುರಿಯೋ ಮಳೆಯನ್ನು ಕಣ್ತುಂಬಿಕೊಳ್ಳಲು ಅದೆಷ್ಟೋ ಪ್ರವಾಸಿಗರು ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ಲಗ್ಗೆಯಿಡುತ್ತಿದ್ದರು. ಆದರೆ ಮಹಾಮಳೆಯಿಂದ ಪ್ರವಾಸೋದ್ಯಮ ನೆಲಕಚ್ಚಿದ್ದು ಚೇತರಿಕೆಗೆ ಹಲವು ತಿಂಗಳುಗಳೇ ಬೇಕೆಂದು ಹೇಳಲಾಗುತ್ತಿದೆ. ಮಳೆ ನಿಂತರೂ ಜಿಲ್ಲೆಯಲ್ಲಿ ಭೂಕುಸಿತದ ಆತಂಕ ಇನ್ನೂ ಮನೆ ಮಾಡಿದೆ. ಪ್ರಮುಖ ಪ್ರವಾಸಿ ತಾಣಗಳೆಲ್ಲ ವೀಕ್ಷಕರಿಲ್ಲದೆ ಭಣಗುಡುತ್ತಿವೆ.

ಪ್ರವಾಸಿ ತಾಣಗಳಲ್ಲಿ ಸಣ್ಣ ಪುಟ್ಟ ವ್ಯಾಪಾರಗಳನ್ನು ಮಾಡಿ ಬದುಕು ಕಟ್ಟಿಕೊಂಡವರೂ ಈಗ ವ್ಯಾಪಾರ ಬಂದ್ ಮಾಡಿ ಜೀವನಕ್ಕೆ ಪರದಾಡುವಂತಾಗಿದೆ.

ದೇಶದ ವಿವಿಧ ಭಾಗಗಳಿಂದ ವಾರ್ಷಿಕ ಅಂದಾಜು 16 ರಿಂದ 18 ಲಕ್ಷ ಪ್ರವಾಸಿಗರು ಭೇಟಿ ನೀಡುತ್ತಾರೆ. ಅದರಲ್ಲೂ ಮಡಿಕೇರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ ಎಂದು ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಅಧಿಕೃತ ಅಂದಾಜಿನ ಪ್ರಕಾರ ಈ ಬಾರಿ ಮಳೆಯಿಂದ ಪ್ರಾಣ ಕಳೆದುಕೊಂಡವರು ಹತ್ತಾರು ಮಂದಿ ಆದರೆ ಹಾನಿಗೊಳಗಾದವರು 50 ಸಾವಿರಕ್ಕೂ ಹೆಚ್ಚು ಜನರು. ಸುಮಾರು 40ಕ್ಕೂ ಹೆಚ್ಚು ಪುನರ್ವಸತಿ ಕೇಂದ್ರಗಳನ್ನು ತೆರೆದು ಸಂತ್ರಸ್ಥರಾದವರಿಗೆ ನೆರವು ನೀಡಲಾಗುತ್ತಿದೆ.

ಕುಶಾಲನಗರ ಮತ್ತು ಮಡಿಕೇರಿ ನಗರಗಳ ಕೆಲವು ಪ್ರದೇಶಗಳು ಹಾಗೂ ಗುಡ್ಡಗಳ ಮೇಲಿದ್ದ 32 ಹಳ್ಳಿಗಳು ಮಳೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ ಎನ್ನಲಾಗಿದೆ.

ಹಾಳಾಗಿರುವ ಮಡಿಕೇರಿ–ಮಂಗಳೂರು, ಮಡಿಕೇರಿ–ಸೋಮವಾರಪೇಟೆ ಹೆದ್ದಾರಿಗಳು ಸೇರಿದಂತೆ ಜಿಲ್ಲೆಯ ಬಹುತೇಕ ರಸ್ತೆಗಳು ಮತ್ತೆ ಸಂಚಾರಕ್ಕೆ ಯೋಗ್ಯವಾಗಲು ವರ್ಷಗಳಷ್ಟು ಕಾಲಾವಕಾಶವೇ ಬೇಕು ಎನ್ನುತ್ತಾರೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು.

ಮಂಗಳೂರು ರಸ್ತೆಯಲ್ಲಿ ಹಲವೆಡೆ ಗುಡ್ಡಗಳು ಕುಸಿದಿವೆ. ರಸ್ತೆಯೇ ಬಿರುಕು ಬಿಟ್ಟಿದೆ. ಜೋಡುಪಾಲದ ಬಳಿ ರಸ್ತೆಯಿದ್ದ ಕುರುಹು ಇಲ್ಲದಂತೆ ಇಡೀ ಪ್ರದೇಶ ಕೆಸರಿನ ಗದ್ದೆಯಾಗಿದೆ.

ಸೋಮವಾರಪೇಟೆ ರಸ್ತೆಯಂತೂ ಮಕ್ಕಂದೂರು ಬಳಿ ಅದೃಶ್ಯವಾಗಿ ಬಿಟ್ಟಿದೆ. ಅದನ್ನು ಮರು ನಿರ್ಮಿಸುವುದು ಸದ್ಯಕ್ಕಂತೂ ಆಗದ ಕೆಲಸ ಎನ್ನುತ್ತಾರೆ ಅಧಿಕಾರಿಗಳು. ಮಡಿಕೇರಿ ಪಕ್ಕದ ಕಾಲೂರಿಗೆ ಈಗ ನಡೆದುಕೊಂಡು ಹೋಗಲು ಸಾಧ್ಯವಿಲ್ಲದಂತೆ ಹಾದಿ ಕೊಚ್ಚಿಹೋಗಿದೆ. ಮಂಗಳೂರಿಗೆ ಹೋಗಬೇಕಾದರೆ ಈಗ ಸುತ್ತಿ ಬಳಸಿ ತೆರಳುವುದು ಅನಿವಾರ್ಯವಾಗಿದೆ.

ಸಾಮಾನ್ಯವಾಗಿ ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ಕೊಡಗಿನಲ್ಲಿ ಪ್ರವಾಸಿಗರಿಗೆ ವಸತಿಗೃಹಗಳಲ್ಲಿ ಕೊಠಡಿಗಳೇ ಸಿಗುತ್ತಿರಲಿಲ್ಲ. ಆದರೆ ಮಹಾಮಳೆ ಜಿಲ್ಲೆಯ ಬದುಕಿನ ಚಿತ್ರಣವನ್ನೇ ಬದಲಾಯಿಸಿತು.

'ಪ್ರವಾಸೋದ್ಯಮ ಜತೆಗೆ ಜನರ ಜೀವನ ಸುಧಾರಣೆಗೆ ಇನ್ನೂ ಎಷ್ಟು ತಿಂಗಳುಗಳು ಬೇಕೋ ಎಂಬ ನಿರೀಕ್ಷೆಯಲ್ಲಿ ಕಾಲ ತಳ್ಳದೆ ವಿಧಿಯಿಲ್ಲ' ಎಂಬ ಮಾತು ಜಿಲ್ಲೆಯ ಜನವಲಯದಲ್ಲಿ ಕೇಳಿ ಬರುತ್ತಿದೆ.



# ಸಾಧಕರು ಇವರು



**ಡಾ॥ ಎ.ಎಸ್.ಕಿರಣ್‌ಕುಮಾರ್**

ಡಾ॥ ಎ. ಎಸ್. ಕಿರಣ್‌ಕುಮಾರ್ ಅವರು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಅಧ್ಯಕ್ಷ ಹುದ್ದೆಯನ್ನು ಅತ್ಯಂತ ದಕ್ಷತೆಯಿಂದ ಹಾಗೂ ಯಶಸ್ವಿಯಾಗಿ ನಿರ್ವಹಿಸಿದ ಎರಡನೆಯ ಕನ್ನಡಿಗರು.

22 ಅಕ್ಟೋಬರ್ 1952ರಲ್ಲಿ ಹಾಸನ ಜಿಲ್ಲೆಯ ಆಲೂರಿನಲ್ಲಿ ಜನಿಸಿದ ಅವರು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಆನರ್ಸ್ ಪದವಿ. ಬೆಂಗಳೂರು ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್ಸಿ) ಎಂ.ಟೆಕ್ ಪದವಿ ಪಡೆದಿದ್ದಾರೆ.

ಬಾಹ್ಯಾಕಾಶ ಸಂಶೋಧನೆಯಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ಆಗಿರುವ ಅನುಕೂಲಗಳು ಮೈಲಿಗಲ್ಲಾಗಿ ಪರಿಣಮಿಸಿವೆ. ಈ ದಿಕ್ಕಿನಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ವೈವಿಧ್ಯಮಯ ಕೊಡುಗೆ ಇಡೀ ನಾಡೇ ಹೆಮ್ಮೆ ಪಡುವಂತಹದ್ದು.

ಇನ್ಸಾಟ್–3ಡಿ, ಮೈಕ್ರೋ ಸ್ಯಾಟ್‌ಲೈಟ್, ಭೂ ಪ್ರದೇಶ ಮಾಪನಾ ಕ್ಯಾಮೆರ ತಂತ್ರಜ್ಞಾನ ಕ್ಷೇತ್ರದಲ್ಲಿ ಕಿರಣ್‌ಕುಮಾರ್ ಅವರ ಆವಿಷ್ಕಾರಗಳು ಅನೇಕ ಮತ್ತು ಗಮನಾರ್ಹ. ಭಾಸ್ಕರ್ ಟಿ. ವಿ. ಪೇ ಲೋಡ್‌ನಿಂದ ಚಂದ್ರಯಾನ ಮತ್ತು ಮಂಗಳಯಾನದ ತನಕ ಆಗಿರುವ ಇಸ್ರೋ ಸಂಸ್ಥೆಯ ಯಶಸ್ಸಿನ ಚರಿತ್ರಾರ್ಹ ಯಾನದಲ್ಲಿ ಕಿರಣ್‌ಕುಮಾರ್ ಅವರು ಅನೇಕ ಬಗೆಯಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದಾರೆ.


ಮಂಗಳಯಾನಕ್ಕೆ ಸಂಬಂಧಿಸಿದ ಅನೇಕ ಉಪಕರಣ ತಯಾರಿಕೆ ಮೇಲ್ವಿಚಾರಣೆಯನ್ನು ಕಿರಣ್‌ಕುಮಾರ್ ನಿರ್ವಹಿಸಿದ್ದಾರೆ. ಇಸ್ರೋನಲ್ಲಿ ಕಿರಣ್‌ಕುಮಾರ್ ಅವರು ಅಧ್ಯಕ್ಷರಾಗುವ ತನಕ ನಿಭಾಯಿಸಿದ ಹುದ್ದೆಗಳು ಅನೇಕ. ಅವೆಲ್ಲವನ್ನೂ ಈ ನಾಡಿನ ಆದ್ಯತೆಯೆಂದು ತಿಳಿದು ಅವರು ಬಹಳ ಬದ್ಧತೆಯಿಂದ ನಿರ್ವಹಿಸಿದ್ದಾರೆ.

ಬಾಹ್ಯಾಕಾಶ ಸಂಶೋಧನೆಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗಿನ ನಿರಂತರ ಒಡನಾಟದಿಂದ ಇವರ ಜ್ಞಾನ ಮತ್ತಷ್ಟು, ಮಗದಷ್ಟು ವೃದ್ಧಿಯಾಗಿ ಇಸ್ರೋ ಸಂಸ್ಥೆಯ ಯೋಜನೆಗಳು ಅದರ ಲಾಭ ಪಡೆಯುವಂತಾಯಿತು. ಬಾಹ್ಯಾಕಾಶ ಸಂಶೋಧನೆಗೆ ಸಂಬಂಧಿಸಿದ ಇವರ ಲೇಖನಗಳು, ಪ್ರಬಂಧಗಳು, ಅಂತರರಾಷ್ಟ್ರೀಯ ಮಟ್ಟದ ಪತ್ರಿಕೆಗೆ, ವಿಚಾರ ಸಂಕಿರಣಗಳಲ್ಲಿ ಪ್ರಕಟಗೊಂಡಿವೆ ಹಾಗೂ ಮಂಡನೆಯಾಗಿವೆ.

ಡಾ॥ ಕಿರಣ್‌ಕುಮಾರ್ ಅವರು ಸಲ್ಲಿಸಿದ ಅನುಪಮ ಸೇವೆಗಾಗಿ ಇವರಿಗೆ ಸಂದ ಗೌರವ ಪುರಸ್ಕಾರಗಳು ಅನೇಕ. ಅವುಗಳಲ್ಲಿ ಪ್ರಮುಖವಾದವುಗಳು – ಪದ್ಮಶ್ರೀ ಪ್ರಶಸ್ತಿ, ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ, ಸರ್. ಎಂ. ವಿ. ಹೆಸರಿನ ಪ್ರಶಸ್ತಿ, ಗುಜರಾತ್ ಇನೋವೇಷನ್ ಸೊಸೈಟಿಯ ಗುಜರಾತ್ ರತ್ನ ಪ್ರಶಸ್ತಿ, ಹಲವಾರು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್‌ಗಳು.

# ಮರೆಯಾಗುತ್ತಿರುವ ಆಟಗಳು

## ಗೋಣಿ ಪಂದ್ಯ :



ಮರೆಯಾಗುತ್ತಿರುವ ಆಟಗಳಲ್ಲಿ ಇದು ಒಂದು ಆಟವೂ ಹೌದು, ಹಾಗೆ ದೇಹಕ್ಕೆ ವ್ಯಾಯಾಮವೂ ಕೂಡ. ಬಹುಶಃ ಗ್ರಾಮೀಣ ಪ್ರದೇಶಗಳಲ್ಲಿ ಈ ಕ್ರೀಡೆ ಉಳಿದಿರಬಹುದು.

ಅಕ್ಕಿ, ಗೋಧಿ ಇವುಗಳನ್ನು ಸಂಗ್ರಹಿಸಿಡುತ್ತಿದ್ದ ಗೋಣಿ ಚೀಲವೇ ಈ ಆಟಕ್ಕೆ ಮುಖ್ಯ ವಸ್ತು. ಗೋಣಿ ಚೀಲದಲ್ಲಿ ಎರಡೂ ಕಾಲುಗಳನ್ನು ಇಳಿಬಿಟ್ಟು, ಗೋಣಿ ಚೀಲದ ಮೇಲ್ಭಾಗವನ್ನು ಸೊಂಟದವರೆಗೂ ಎಳೆದು ಕಟ್ಟಿ ಈ ಪಂದ್ಯವನ್ನು ಆಡಲಾಗುತ್ತದೆ. ಪ್ರಾರಂಭದ ಬಿಂದುವಿನಲ್ಲಿ ಒಂದೇ ಸಾಲಿನಲ್ಲಿ ಸಾಲಾಗಿ ಸ್ಪರ್ಧಿಗಳು ನಿಲ್ಲಬೇಕು. ಸೀಟಿ ಊದಿದ ಕೂಡಲೇ ಹಾರುತ್ತಾ, ನಿಗದಿತ ಸ್ಥಳವನ್ನು ತಲುಪಬೇಕು. ಮೊದಲ, ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಪಡೆದವರಿಗೆ ಬಹುಮಾನ.

ಹಾರುವಾಗ ದೇಹದ ಎಲ್ಲಾ ಅಂಗಗಳಿಗೆ ವ್ಯಾಯಾಮವಾಗುವುದರ ಜೊತೆಗೆ, ಆಡುವವರ ಹಾಗೂ ನೋಡುಗರ ಮುಖದಲ್ಲಿ ನಗು ಗಮನಿಸುವುದೇ ಖುಷಿ.

# ಹ್ಯಾಲೋವೀನ್ – ಈ ಹಬ್ಬದ ಆಚರಣೆ ಬಗ್ಗೆ ನಿಮಗೆ ಗೊತ್ತೇ?



ಹ್ಯಾಲೋವೀನ್ ಎನ್ನುವುದು ಅಕ್ಟೋಬರ್ 31ನೇ ತಾರೀಖಿನಂದು ಆಚರಿಸುವ ಒಂದು ವಾರ್ಷಿಕ ಹಬ್ಬವಾಗಿದೆ. ಇದು ಮೂಲತಃ ಸೆಲ್ಟ್ ಜನಗಳ ಹಬ್ಬವಾಗಿದೆ. ಆದರೆ ಇಂದು ಇದನ್ನು ಜಾತ್ಯತೀತವಾಗಿ ದೊಡ್ಡ ಪ್ರಮಾಣದಲ್ಲಿ ಎಲ್ಲೆಡೆಯೂ ಆಚರಿಸಲಾಗುತ್ತದೆ. ಹ್ಯಾಲೋವೀನ್ ಹಬ್ಬದಲ್ಲಿ ಮಾಡುವ ಚಟುವಟಿಕೆಗಳೆಂದರೆ ವೇಷಭೂಷಣಗಳನ್ನು ಧರಿಸುವುದು ಮತ್ತು ವೇಷ ಭೂಷಣದ ಪಾರ್ಟಿಗಳಿಗೆ ಹೋಗುವುದು, ಜ್ಯಾಕ್–ಒ–ಲ್ಯಾಂಟರ್ನ್‌ಗಳನ್ನು ಕೆತ್ತುವುದು, ಆವಿಷ್ಟ ಆಕರ್ಷಣೆಗಳನ್ನು ನೋಡಲು ಹೋಗುವುದು.

ಪ್ರಾಚೀನ ಸೆಲ್ಟರು ಈ ಹಬ್ಬದಂದು ಮನೆಯ ಪೂರ್ವಿಕರನ್ನು ಸನ್ಮಾನಿಸಿ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಬೇಡಿಕೊಳ್ಳುತ್ತಿದ್ದರು. ದುಷ್ಟ ಆತ್ಮಗಳನ್ನು ಓಡಿಸುವ ಸಲುವಾಗಿಯೇ ವೇಷಭೂಷಣಗಳನ್ನು ಮತ್ತು ಮುಖವಾಡಗಳನ್ನು ಧರಿಸಿಕೊಳ್ಳಬೇಕಾಯಿತು ಎಂದು ನಂಬಲಾಗಿದೆ. ಇದರ ಉದ್ದೇಶ ಎಂದರೆ ತಾನು ದುಷ್ಟ ಆತ್ಮದಂತೆ ಮಾರುವೇಷ ಹಾಕಿಕೊಂಡು ತೊಂದರೆಯಿಂದ ತಪ್ಪಿಸಿಕೊಳ್ಳುವುದು.

### ಸಂಕೇತಗಳು:

ಇತ್ತೀಚೆಗೆ ಹ್ಯಾಲೋವೀನ್‌ಗೆ ಸಂಬಂಧಪಟ್ಟ ಕುಶಲಕಲೆಗಳು ಮತ್ತು ಸಂಕೇತಗಳು ರೂಪುಗೊಂಡಿವೆ. ಅವುಗಳೆಂದರೆ, ಮೂಲಂಗಿಯಿಂದ ಮಾಡಿದ ಮೇಣದ ಬತ್ತಿಗಳನ್ನು ಬಳಸಿ ಮಾಡುವುದು, ಜ್ಯಾಕ್–ಒ–ಲ್ಯಾಂಟರ್ನ್‌ಗಳನ್ನು ಮಾಡುವುದು, ಕುಂಬಳ ಕಾಯಿಗಳನ್ನು ಭಯಾನಕ ಇಲ್ಲವೇ ಹಾಸ್ಯಮಯವಾದ ಮುಖವನ್ನಾಗಿ ಕೊರೆದು ಅವುಗಳನ್ನು ಮನೆಯ ಅಂಗಳದಲ್ಲಿ ಪ್ರದರ್ಶಿಸುವುದು.

### ಟ್ರಿಕ್ ಆರ್ ಟ್ರೀಟ್

ಟ್ರಿಕ್ ಆರ್ ಟ್ರೀಟ್ ಮಾಡುವುದು ಹ್ಯಾಲೋವೀನ್‌ನಲ್ಲಿ ಮಕ್ಕಳಿಗೆ ಒಂದು ಸಂಪ್ರದಾಯದ ಆಚರಣೆ. ಸಣ್ಣ ಮಕ್ಕಳು ವೇಷಭೂಷಣಗಳನ್ನು ಧರಿಸಿ ಒಂದು ಚೀಲದೊಂದಿಗೆ ನೆರೆಯವರ ಮನೆಗೆ ಹೋಗಿ ಟ್ರಿಕ್ ಆರ್ ಟ್ರೀಟ್ ಎಂಬ ಪ್ರಶ್ನೆಯನ್ನು ಕೇಳುತ್ತಾರೆ. ಆ ಮನೆಯ ಹಿರಿಯರು ಮಕ್ಕಳಿನ ಚೀಲದಲ್ಲಿ ಸಕ್ಕರೆ ಮಿಠಾಯಿಗಳನ್ನು ಹಾಕಿ ಆಶೀರ್ವಾದ ಮಾಡಿ ಕಳುಹಿಸುತ್ತಾರೆ.

ಇತ್ತೀಚೆಗೆ ಹ್ಯಾಲೋವೀನ್ ಭಾರತದಲ್ಲಿಯೂ ಜನಪ್ರಿಯವಾಗಿದೆ. ಯುವ ಜನರು ತಮ್ಮ ಸ್ವಂತ ಕೈಗಳಿಂದ ವೇಷಭೂಷಣಗಳನ್ನು ತಯಾರಿಸುತ್ತಾರೆ. ಮನೆಯಲ್ಲಿ ಒಂದು ಪಾರ್ಟಿಯನ್ನು ಆಯೋಜಿಸಿ ತಾವೇ ಮಾಡಿರುವ ಸಿಹಿ ತಿನಿಸುಗಳನ್ನು ಹಾಗೂ ಕುಂಬಳಕಾಯಿ ರಸವನ್ನು ಹಂಚುತ್ತಾರೆ. ಹೀಗೆ ಈ ಹಬ್ಬವನ್ನು ಸಂಭ್ರಮಿಸುತ್ತಾರೆ.



### ಹುಟ್ಟುಹಬ್ಬದ ಶುಭಾಶಯಗಳು

**2018ನೇ ವರ್ಷದ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು / ಸಿಬ್ಬಂದಿಗಳಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.**

**– ಸಂಪಾದಕೀಯ ಮಂಡಳಿ**



### ಹಾರ್ದಿಕ ಬೀಳ್ಕೊಡುಗೆ

**ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2018ನೇ ವರ್ಷದ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.**

**– ಸಂಪಾದಕೀಯ ಮಂಡಳಿ**

# ವಿದ್ಯುತ್ ಸರಬರಾಜಿಗೆ ವಿತರಣಾ ಲೈಸೆನ್ಸ್‌ದಾರರ ಷರತ್ತುಗಳು

**....ಮುಂದುವರಿದ ಭಾಗ**

**ಸಿ) ನಿವಾಸಿ ಅಪಾರ್ಟ್‌ಮೆಂಟುಗಳು / ಸಂಕೀರ್ಣ(ಗಳಿ)ಗೆ ಮಾಪಕ ಅಳವಡಿಕೆ**

ಕವಿನಿ ಆಯೋಗ (ವಿದ್ಯುತ್ ಸರಬರಾಜಿನ ವೆಚ್ಚಗಳ ವಸೂಲಿ) ನಿಬಂಧನೆಗಳು, 2004 ಮತ್ತು ಕಾಲಕಾಲಕ್ಕೆ ಇದರ ತಿದ್ದುಪಡಿಗಳು (ಅನುಬಂಧ-2)ರ ಕಲಮು 3.1.1ರ ಟಿಪ್ಪಣಿ (ಬಿ) ಮತ್ತು (ಸಿ)ಯಲ್ಲಿ ಸೂಚಿಸಿರುವ ಎಲ್ಲ ಷರತ್ತುಗಳನ್ನು ಪಾಲಿಸುವುದಕ್ಕೆ ಒಳಪಟ್ಟು, ಅರ್ಜಿದಾರರು ಪ್ರತಿಯೊಂದು ಸ್ಥಾಪನಕ್ಕೆ ಪ್ರತ್ಯೇಕ ಎಲ್.ಟಿ. ಮಾಪಕವನ್ನು ಅಳವಡಿಸಿ ವಿದ್ಯುತ್ ಸರಬರಾಜು ಕೋರಿದರೆ, ಎಲ್.ಟಿ. ವಿದ್ಯುತ್ ಸರಬರಾಜು ಒದಗಿಸತಕ್ಕದ್ದು.

ಡಿ) ಸರ್ವಸಾಮಾನ್ಯ ಸ್ಥಳಗಳಾದ (ಲಿಫ್ಟ್), ನೀರು ಸರಬರಾಜು, ಮೆಟ್ಟಲ ಸಾಲು (ಸ್ಟೇರ್‌ಕೇಸ್) ದೀಪ ವ್ಯವಸ್ಥೆ ಇತರೆಗಳಿಗೆ ಪ್ರತ್ಯೇಕ ಮಾಪಕವನ್ನು ಅಳವಡಿಸಿದ್ದಲ್ಲಿ, ಕವಿನಿ ಆಯೋಗ (ವಿದ್ಯುತ್ ಸರಬರಾಜಿನ ವೆಚ್ಚಗಳ ವಸೂಲಿ) ನಿಬಂಧನೆಗಳು, 2004 ಮತ್ತು ಕಾಲಕಾಲಕ್ಕೆ ಇದರ ತಿದ್ದುಪಡಿಗಳು (ಅನುಬಂಧ-2)ರ ಕಲಮು 3.1.1ರ ಟಿಪ್ಪಣಿ (ಬಿ) ಮತ್ತು (ಸಿ) ಯಲ್ಲಿ ವರ್ಗೀಕರಿಸಿರುವಂತೆ, ನಿವಾಸಿ ಅಥವಾ ವಾಣಿಜ್ಯ ವಿದ್ಯುತ್ ದರದ ಅಡಿಯಲ್ಲಿ ಬಿಲ್ ಮಾಡತಕ್ಕದ್ದು.

ಇ) ಸಂಯುಕ್ತ ನಿವಾಸಿ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ಕೋರಿತ ವಿದ್ಯುತ್ ಪ್ರಮಾಣ 100 ಕಿಲೋ ವಾಟ್‌ಗಿಂತ ಕಡಿಮೆ ಇರುವ ಕಟ್ಟಡಗಳಿಗೆ, ಸ್ಥಾಪನವು ಗೃಹಬಳಕೆ ಅಥವಾ ವಾಣಿಜ್ಯವಾಗಿರಲಿ, ಪ್ರತಿ ಸ್ಥಾಪನಕ್ಕೆ ಎಲ್.ಟಿ. ಆಧಾರದ ಪ್ರಕಾರ ಪ್ರತ್ಯೇಕ ಮಾಪಕವನ್ನು ಅಳವಡಿಸಿ, ವಿದ್ಯುತ್ ಸರಬರಾಜು ಮಾಡತಕ್ಕದ್ದು. ಯುಕ್ತ ಪ್ರವರ್ಗದಲ್ಲಿ ಬಿಲ್ ಮಾಡತಕ್ಕದ್ದು.

ಎಫ್) ಕೋರಿತ ವಿದ್ಯುತ್ ಪ್ರಮಾಣ 100 ಕಿಲೋ ವಾಟ್‌ಗಿಂತ ಕಡಿಮೆ ಇರುವ ವಾಣಿಜ್ಯ ಉದ್ದೇಶದ ಕಟ್ಟಡಗಳಿಗೆ, ಪ್ರತಿ ಸ್ಥಾಪನಕ್ಕೆ ಪ್ರತ್ಯೇಕ ಮಾಪಕವನ್ನು ಅಳವಡಿಸಿ, ಎಲ್.ಟಿ. ಆಧಾರದ ಪ್ರಕಾರ ವಿದ್ಯುತ್ ಸರಬರಾಜು ಮಾಡತಕ್ಕದ್ದು. ಯುಕ್ತ ಪ್ರವರ್ಗದಲ್ಲಿ ಬಿಲ್ ಮಾಡತಕ್ಕದ್ದು.

**ಟಿಪ್ಪಣಿ:**

(i) ಈಗಾಗಲೇ ವಿದ್ಯುತ್ ಸರಬರಾಜು ಇರುವ ವಾಣಿಜ್ಯ ಕಟ್ಟಡಗಳ ಪ್ರಕರಣಗಳಲ್ಲಿ, ಕೋರಿತ ಪ್ರಮಾಣ 100 ಕಿಲೋ ವಾಟ್‌ಗಿಂತ ಕಡಿಮೆ ಇದ್ದು, ಗ್ರಾಹಕರು ಪ್ರತಿ ಸ್ಥಾಪನಕ್ಕೆ ಪ್ರತ್ಯೇಕ ಮಾಪಕವನ್ನು ಇಚ್ಛಿಸಿದರೆ, ಗ್ರಾಹಕರು ಅವರ ಆವರಣದಲ್ಲಿ ಹಾಲಿ ಇರುವ ಬಲ್ಕ್ ಮೀಟರ್ ಸಮೀಪದಲ್ಲಿ ಮಾಪಕವನ್ನು ಸ್ಥಾಪಿಸಲು ಅವಕಾಶ ಕಲ್ಪಿಸಿ, ವಿದ್ಯುತ್ ಪರವಾನಗಿ ಪಡೆದಿರುವ ವಿದ್ಯುತ್ ಗುತ್ತಿಗೆದಾರರ ಮೂಲಕ ವೈರಿಂಗ್ ಕಾರ್ಯವನ್ನು ಸ್ವಂತ ವೆಚ್ಚದಲ್ಲಿ ಮಾಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ವ್ಯವಸ್ಥೆ ಮಾಡಬಹುದಾಗಿದೆ. ಆದರೂ, ಸ್ಥಾಪನವನ್ನು ವಿಭಜಿಸಿ ಪ್ರತ್ಯೇಕ ಮಾಪಕವನ್ನು ಅಳವಡಿಸಿದಾಗ, ಅದರ ವಿದ್ಯುತ್ ಹೊರೆಯ ಪ್ರಮಾಣಕ್ಕೆ ಬಲ್ಕ್ ಮಾಪಕದ ಮಂಜೂರಾದ ವಿದ್ಯುತ್ ಹೊರೆಯ ಪ್ರಮಾಣವು ಸ್ವಾಭಾವಿಕವಾಗಿ ಇಳಿತಗೊಳ್ಳತಕ್ಕದ್ದು.

(ii) ಈಗಾಗಲೇ ಮಂಜೂರಾಗಿರುವ ಒಟ್ಟಾರೆ ಹೊರೆಗಿಂತ ಹೆಚ್ಚಿನ ಹೊರೆಯು ಬೇಕಾದರೆ, ಒಟ್ಟಾರೆ ಹೊರೆಯು 100 ಕಿಲೋ ವಾಟ್‌ಗಳನ್ನು ಮೀರದಂತೆ ಹೆಚ್ಚಿನ ಹೊರೆಯನ್ನು ಮಂಜೂರು ಮಾಡಬಹುದಾಗಿದೆ. 100 ಕಿಲೋ ವಾಟ್ ಮತ್ತು ಹೆಚ್ಚಿನ ಹೊರೆಗೆ, ಗ್ರಾಹಕರು ಎಚ್.ಟಿ. ವಿದ್ಯುತ್ ಸರಬರಾಜನ್ನು ಪಡೆಯತಕ್ಕದ್ದು.

**9.10 ವಿದ್ಯುತ್ ಮರುಮಾರಾಟ**

ಕೆಳಗೆ ಸೂಚಿಸಿರುವುದನ್ನು ಹೊರತುಪಡಿಸಿ, ಗ್ರಾಹಕರು, ವಿದ್ಯುತ್ ವಿತರಣೆ ಮತ್ತು ಮಾರಾಟಕ್ಕಾಗಿ ತಮ್ಮ ಬಳಿ ಕವಿನಿ ಆಯೋಗದಿಂದ ಸೂಕ್ತ ಅನುಮತಿ ಅಥವಾ ಲೈಸೆನ್ಸು ಹೊಂದಿರದಿದ್ದರೆ, ಲೈಸೆನ್ಸುದಾರರಿಂದ ಅವರಿಗೆ ಸರಬರಾಜಾದ ವಿದ್ಯುತ್ತನ್ನು ಪೂರ್ತಿಯಾಗಲೀ ಅಥವಾ ಭಾಗಶಃ ಬೇರೆ ವ್ಯಕ್ತಿಗೆ ಮರುಸರಬರಾಜು ಮಾಡತಕ್ಕದ್ದಲ್ಲ:

ಎ) ಕಲಮು 9.00ರ ಅಡಿಯಲ್ಲಿ ವಿದ್ಯುತ್ ಸರಬರಾಜು ಪಡೆಯುವ ಯಾವುದೇ ನೋಂದಾಯಿತ ಗ್ರಾಹಕರು ತಮ್ಮ ಬಾಡಿಗೆದಾರರು/ಪ್ರತ್ಯೇಕ ಗ್ರಾಹಕರಿಗೆ ವಿದ್ಯುತ್ ಸರಬರಾಜನ್ನು ವಿಸ್ತರಿಸಬಹುದು. ಇದು ಮರುಮಾರಾಟವೆಂದು ಪರಿಗಣಿತವಾಗುವುದಿಲ್ಲ.


ಬಿ) ವಾಣಿಜ್ಯ, ಕಚೇರಿ ಅಥವಾ ನಿವಾಸಿ ಸಂಕೀರ್ಣಗಳಾಗಿರಲಿ, ಮೂಲತಃ ಆ ಸಂಕೀರ್ಣದ ನಿರ್ಮಾಣದಾರರು ಅಥವಾ ಪ್ರವರ್ತಕರ ಹೆಸರಿನಲ್ಲಿ ಎಚ್.ಟಿ. ಅಥವಾ ಎಲ್.ಟಿ. ವಿದ್ಯುತ್ ಸರಬರಾಜು ಪಡೆದಿದ್ದು, ತದನಂತರ ಆ ಸಂಕೀರ್ಣದ ಮಾಲಿಕತ್ವವನ್ನು ಇಡಿಯಾಗಿ ವಿವಿಧ ಪ್ರತ್ಯೇಕ ವ್ಯಕ್ತಿಗಳಿಗೆ ವರ್ಗಾಯಿಸಿದರೆ ಅಥವಾ ಭಾಗಶಃ ವಿವಿಧ ಪ್ರತ್ಯೇಕ ವ್ಯಕ್ತಿಗಳಿಗೆ ವರ್ಗಾಯಿಸಿ ಉಳಿದದ್ದನ್ನು ಭೋಗ್ಯಕ್ಕಾಗಿ ಉಳಿಸಿಕೊಂಡರೆ, ವಿದ್ಯುತ್ ಸರಬರಾಜನ್ನು ಮುಂದೆ ಸೂಚಿಸಿರುವಂತೆ ಮುಂದುವರಿಸಬಹುದಾಗಿದೆ.

(i). ಆ ಸಂಕೀರ್ಣದ ನಿರ್ಮಾಣದಾರ ಅಥವಾ ಪ್ರವರ್ತಕ, ಯಾರ ಹೆಸರಿನಲ್ಲಿ ವಿದ್ಯುತ್ ಸರಬರಾಜು ಮುಂದುವರಿದಿರುತ್ತದೋ, ಅವರು ಆ ಸಂಕೀರ್ಣದಲ್ಲಿ ವಿವಿಧ ಪ್ರತ್ಯೇಕ ವಸತಿ ಗೃಹಗಳ ಮಾಲಿಕರಿಗೆ ಅಥವಾ ಭೋಗ್ಯದಾರರಿಗೆ, ಅವರ ಸ್ಥಾಪನಕ್ಕೆ ಉಪ ಮಾಪಕವನ್ನು ಅಳವಡಿಸಿ ವಿದ್ಯುತ್ ಸರಬರಾಜು ವಿಸ್ತರಿಸಿ ಲಾಭ ಅಥವಾ ನಷ್ಟವಿಲ್ಲದ ರೀತಿಯಲ್ಲಿ (ಅಂದರೆ ವಿದ್ಯುತ್ ಬಿಲ್ಲನ್ನು ಹಂಚಿಕೊಳ್ಳುವುದು) ವಿದ್ಯುತ್ ಬಿಲ್ ಮೊತ್ತವನ್ನು ವಸೂಲಿ ಮಾಡತಕ್ಕದ್ದು. ಈ ರೀತಿಯ ಕ್ರಮವನ್ನು ಸರಬರಾಜಿನ ಅನಧಿಕೃತ ವಿಸ್ತರಣೆ ಎಂದಾಗಲೀ ಅಥವಾ ಮರುಮಾರಾಟವೆಂದಾಗಲೀ ಪರಿಗಣಿಸತಕ್ಕದ್ದಲ್ಲ.

(ii). ಸಂಕೀರ್ಣವನ್ನು ಪೂರ್ಣಗೊಳಿಸಿದ ನಂತರ, ನಿರ್ಮಾಣದಾರ ಅಥವಾ ಪ್ರವರ್ತಕ ಆ ಸಂಕೀರ್ಣದಲ್ಲಿ ಯಾವುದೇ ರೀತಿಯ ಪಾಲುಗೊಳ್ಳುವಿಕೆಯನ್ನು ಹೊಂದಲು ಇಷ್ಟ ಪಡದಿದ್ದರೆ, ಮೂಲತಃ ಪಡೆದಿರುವ ವಿದ್ಯುತ್ ಸಂಪರ್ಕ ಸೌಲಭ್ಯವನ್ನು ಆ ಸಂಕೀರ್ಣದಲ್ಲಿ ಸ್ಥಾಪಿಸಬಹುದಾದ ಸಂಘ ಅಥವಾ ಸೊಸೈಟಿಯ ಹೆಸರಿನಲ್ಲಿ ವರ್ಗಾಯಿಸಿ ನೋಂದಾಯಿಸಿಕೊಡಬಹುದಾಗಿದೆ. ವರ್ಗಾವಣೆ ಪಡೆದುಕೊಂಡ ಸಂಘ ಅಥವಾ ಸೊಸೈಟಿಯು ವಸತಿ ಗೃಹಗಳ ಪ್ರತ್ಯೇಕ ಮಾಲಿಕರಿಗೆ ಅಥವಾ ಭೋಗ್ಯದಾರರಿಗೆ, ಅವರ ಸ್ಥಾಪನಕ್ಕೆ ಉಪ ಮಾಪಕವನ್ನು ಅಳವಡಿಸಿ ವಿದ್ಯುತ್ ಸರಬರಾಜು ವಿಸ್ತರಿಸಿ ಲಾಭ ಅಥವಾ ನಷ್ಟವಿಲ್ಲದ ರೀತಿಯಲ್ಲಿ (ಅಂದರೆ ವಿದ್ಯುತ್ ಬಿಲ್ಲನ್ನು ಹಂಚಿಕೊಳ್ಳುವುದು) ವಿದ್ಯುತ್ ಬಿಲ್ ಮೊತ್ತವನ್ನು ವಸೂಲಿ ಮಾಡತಕ್ಕದ್ದು. ಈ ರೀತಿಯ ಕ್ರಮವನ್ನು ಅನಧಿಕೃತ ವಿಸ್ತರಣೆ ಎಂದಾಗಲೀ ಅಥವಾ ಮರುಮಾರಾಟವೆಂದಾಗಲೀ ಪರಿಗಣಿಸತಕ್ಕದ್ದಲ್ಲ.

**ಮುಂದುವರೆಯುವುದು....**

# ಅ.2 ಗಾಂಧಿ ಜಯಂತಿ : ಮಹಾತ್ಮರ ಸಮಯ ಪ್ರಜ್ಞೆ



ದೇಶದಲ್ಲಿ ವಿಶಿಷ್ಟ ಸಂದರ್ಭಗಳು ಹಬ್ಬ-ಉತ್ಸವಗಳಿಗೆ ವಿಶೇಷ ಮಹತ್ವ ಕಲ್ಪಿಸುವುದಕ್ಕಾಗಿ ಸಾರ್ವಜನಿಕ ಸಮಾರಂಭ, ಭಾಷಣ ಮೊದಲಾದವುಗಳನ್ನು ಆಯೋಜಿಸಲಾಗುತ್ತದೆ.

ಇಂತಹ ಸಭೆ-ಸಮಾರಂಭಗಳ ಶೋಭೆ, ಆಕರ್ಷಣೆಗಾಗಿ ಗಣ್ಯರನ್ನು ಭಾಷಣ, ಅಧ್ಯಕ್ಷತೆಗಾಗಿ ಆಹ್ವಾನಿಸುವುದೂ ಇದೆ. ಈ ಸಭೆಯ ಬಗ್ಗೆ ಆಮಂತ್ರಣ ಪತ್ರ, ಪತ್ರಿಕೆಗಳಲ್ಲಿ ಜಾಹಿರಾತಿನ ಮೂಲಕ ಜನಸಾಮಾನ್ಯರನ್ನೂ, ಗಣ್ಯರನ್ನೂ ಆಹ್ವಾನಿಸಲಾಗುತ್ತದೆ. ಅಧ್ಯಕ್ಷತೆಗೋ, ಭಾಷಣಕ್ಕೋ ಬರಲೊಪ್ಪಿದ ಗಣ್ಯವ್ಯಕ್ತಿಗಳು ಕೆಲವೊಮ್ಮೆ ಯಕಃಶ್ಚಿತ್ ಕಾರಣಗಳಿಗಾಗಿ ಕಾರ್ಯಕ್ರಮಗಳಿಗೆ ಗೈರು ಹಾಜರಾಗುವುದಿದೆ. ಅಂತಹ ಜನರ ಕಣ್ಣು ತೆರೆಯಿಸುವಂತಹ ಒಂದು ಪ್ರಭಾವಶಾಲಿ ಪ್ರಸಂಗ ಇಲ್ಲಿದೆ.

ಭಾರತದ ಸ್ವಾತಂತ್ರ್ಯ ಭಾಗ್ಯವಿಧಾತರಾದ ಮಹಾತ್ಮಾ ಗಾಂಧೀಜಿಯವರು ಆಗ ಸಬರಮತಿ ಆಶ್ರಮದಲ್ಲಿದ್ದರು. ಒಂದು ದಿನ ಆಶ್ರಮದಲ್ಲಿ ಬೆಳಿಗ್ಗೆ ಬಾಪೂಜಿ ಪ್ರಾರ್ಥನೆಯ ಸಿದ್ಧತೆಯಲ್ಲಿದ್ದರು. ಆಗ ಒಂದು ಹಳ್ಳಿಯ ಕೆಲ ಜನರು ಹೇಳತೊಡಗಿದರು "ನಾಳೆ ನಮ್ಮ ಊರಲ್ಲಿ ಒಂದು ಮುಖ್ಯ ಸಭೆ ನಡೆಯಲಿದೆ. ತಾವು ಕೃಪೆಯಿಟ್ಟು ಬರಬೇಕು" ಗಾಂಧೀಜಿ ಆ ಊರಿನ ನೇತಾರನೊಡನೆ 'ನಿಮ್ಮ ಸಭೆಯ ಸಮಯ ಯಾವಾಗ ?' ಎಂದು ಕೇಳಿದರು. ಆತ "ಸಭೆಯ ಸಮಯ - ಸಂಜೆ ನಾಲ್ಕು ಗಂಟೆ", ಎಂದು ತಿಳಿಸಿದ. ಗಾಂಧೀಜಿಯವರು ಒಪ್ಪಿದಾಗ ಆ ನೇತಾರ ನುಡಿದ "ಬಾಪೂಜಿ ನಾಳೆ ಸರಿಯಾದ ಸಮಯಕ್ಕೆ ನಾನು ಕಾರು ತಗೊಂಡು ಬರುತ್ತೇನೆ. ನಿಮಗೆ ಸಭೆಗೆ ಬರಲು ತೊಂದರೆಯಾಗದಿರಲಿ," ಗಾಂಧೀಜಿ ಒಪ್ಪಿಗೆ ಸೂಚಿಸುತ್ತಾ "ನಾನು ಸಿದ್ಧನಿರುತ್ತೇನೆ, ನೀವು ಬನ್ನಿರಿ" ಎಂದರು.

ಮರುದಿನ ಸಂಜೆ 3.45 ಆದರೂ ಆ ನೇತಾರ ಬಾರದಿದ್ದಾಗ ಗಾಂಧೀಜಿ ಚಿಂತಿತರಾದರು ಮತ್ತು ಒಂದು ಉಪಾಯ ಮಾಡಿದರು. ಸ್ವಲ್ಪ ಸಮಯದ ಬಳಿಕ ಆ ಹಳ್ಳಿಯ ನೇತಾರನು ಆಶ್ರಮಕ್ಕೆ ತಲುಪಿದ. ಅಲ್ಲಿ ಗಾಂಧೀಜಿಯವರಿರಲಿಲ್ಲ. ಗಾಂಧೀಜಿಗಾಗಿ ಕಾದ ಆ ನೇತಾರ ಸಭಾ ಸ್ಥಳಕ್ಕೆ ವಾಪಸಾದ. ಆದರೆ ಅಲ್ಲಿ ಆತ ನೋಡುತ್ತಾನೆ, ಗಾಂಧೀಜಿ ಸ್ಫೂರ್ತಿಯಿಂದ ಭಾಷಣ ಮಾಡುತ್ತಿದ್ದಾರೆ, ಜನರು ತಲ್ಲೀನರಾಗಿ ಭಾಷಣ ಕೇಳುತ್ತಿದ್ದಾರೆ. ಮುಕ್ತಾಯವಾದಾಗ, ಗಾಂಧೀಜಿಯವರ ಬಳಿ ಹೋದ ಆ ನೇತಾರ ಕೇಳಿದ - "ನಾನು ನಿಮ್ಮನ್ನು ಕರೆದು ತರಲೆಂದು ಆಶ್ರಮಕ್ಕೆ ಹೋದೆ. ಅದರೆ ಅಲ್ಲಿ ನೀವು ಸಿಗಲಿಲ್ಲ. ಮತ್ತೆ ನೀವು ಹೇಗೆ ಇಲ್ಲಿಗೆ ತಲುಪಿದಿರಿ?," ಗಾಂಧೀಜಿ ಸಮಾಧಾನದಿಂದ ಉತ್ತರಿಸಿದರು - "ಸಭೆಯ ನಿಶ್ಚಿತ ವೇಳೆ 4.00 ಗಂಟೆ 3.45 ಆದರೂ ನೀವು ಬಾರದಿದ್ದಾಗ, ನಾನು ಯೋಚಿಸಿದೆ- ನನ್ನಿಂದಾಗಿ ನಿಮ್ಮ ವೇಳೆ ಹಾಳಾಗಬಾರದು! ಅದಕ್ಕಾಗಿ ನನ್ನ ಸೈಕಲ್ ತೆಗೆದುಕೊಂಡು ಇಲ್ಲಿಗೆ ಬಂದೇ ಬಿಟ್ಟೆ" ಇದನ್ನು ಕೇಳಿ ನೇತಾರ ನಾಚಿಕೆಯಿಂದ ತಲೆ ತಗ್ಗಿಸಿದ. ಆಗ ಗಾಂಧೀಜಿಯವರು "ಸಮಯವೆಂಬುದು ಬಹು ಅಮೂಲ್ಯ ನಾವು ಪ್ರತಿನಿತ್ಯವೂ ಸಮಯದ ಸದುಪಯೋಗ ಮಾಡಬೇಕು, ಮನುಷ್ಯನ ಪ್ರಗತಿಯಲ್ಲಿ ಸಮಯದ ಉಪಯೋಗ ಬಹಳ ಮುಖ್ಯ" ಎಂದು ನುಡಿದರು, ಆಗ ಆ ನೇತಾರನ ಮನಸ್ಸಿಗೆ ಗಾಂಧೀಜಿಯ ಮಾತಿನ ಅರ್ಥವಾಗಿ ಆತ ತಲೆ ಬಾಗಿಸಿದ.

ಮಹಾತ್ಮರು ಯಾವಾಗಲೂ ತಮ್ಮ ಜೀವನದ ಆಚರಣೆಯಿಂದಲೇ ಇತರರಿಗೆ ಮಾರ್ಗದರ್ಶನ ನೀಡುತ್ತಾರೆ. ಗಂಟೆಗಟ್ಟಲೆ ನೀಡುವ ಸುದೀರ್ಘ ಭಾಷಣದ ಬದಲು, ಸ್ಪಷ್ಟ ಜೀವನದ ಉದಾಹರಣೆಯಿಂದ ಜನರ ಹೃದಯಕ್ಕೆ ನಾಟುವಂತಹ ಮಾರ್ಗದರ್ಶನ ನೀಡುತ್ತಾರೆ. ಆದ್ದರಿಂದಲೇ ಅವರು ಮಹಾತ್ಮರೆನಿಸುತ್ತಾರೆ.

(ಸಂಗ್ರಹ ಲೇಖನ)

# ಆರೋಗ್ಯವೇ ಭಾಗ್ಯ

## ಕರಿಬೇವಿನ ಸೊಪ್ಪು



ಇದೊಂದು ಸಾಂಬಾರದ ಎಲೆ, ಸುವಾಸನೆವುಳ್ಳದ್ದು, ನಿತ್ಯವೂ ಆಹಾರದಲ್ಲಿ ಒಗ್ಗರಣೆಗಾಗಿ ಬಳಸುತ್ತಾರೆ. ಆದರೆ ಇದರ ಅಪಾರವಾದ ಔಷಧೀಯ ಗುಣಗಳು ಬಹಳಷ್ಟು ಜನಕ್ಕೆ ಗೊತ್ತಿಲ್ಲವಾದ್ದರಿಂದ ಔಷಧವಾಗಿ ಉಪಯೋಗಿಸುವುದು ವಿರಳ.

**ಕಾಮಾಲೆ ಅಥವಾ ಜಾಂಡೀಸ್ ನಿವಾರಣೆಗೆ:**

ಒಂದು ಹಿಡಿ ಕರಿಬೇವಿನ ಸೊಪ್ಪನ್ನು ನುಣ್ಣಗೆ ಅರೆದು, ಒಂದು ಕಪ್ಪಿನಷ್ಟು ಹಸುವಿನ ಹಾಲಿನಲ್ಲಿ ಬೆರೆಸಿ ಹಿಂಡಿ ಸೋಸಿಕೊಳ್ಳಬೇಕು. ಈ ರಸವನ್ನು ಬೆಳಗಿನ ಜಾವ ಕಾಮಾಲೆ ರೋಗಿಗೆ ಬರೀ ಹೊಟ್ಟೆಯಲ್ಲಿ ಕುಡಿಸಬೇಕು. ಹೀಗೆ 8–10 ದಿನಗಳು ತಪ್ಪದೇ ಸೇವಿಸಬೇಕು. ಎಣ್ಣೆ ಮತ್ತು ಜಿಡ್ಡಿನ ಪದಾರ್ಥಗಳನ್ನು ಕಟ್ಟು ನಿಟ್ಟಾಗಿ ಬಿಡಬೇಕು. ಹುರುಳಿಕಟ್ಟು, ಬೇಳೆ ಕಟ್ಟಿನ ಸಪ್ಪೆ ಸಾರನ್ನು ಊಟದಲ್ಲಿ ಬಳಸಬೇಕು.

**ದೇಹದ ತೂಕವನ್ನು ತಗ್ಗಿಸಲು ಮತ್ತು ಜೀರ್ಣಕ್ರಿಯೆಗೆ:**

ಬೇರೆ ಚಟ್ನಿಗಳನ್ನು ತಯಾರಿಸುವಂತೆಯೇ ಕರಿಬೇವಿನ ಚಟ್ನಿಯನ್ನು ಉಪ್ಪು, ಮೆಣಸು ಸೇರಿಸಿ ತಯಾರಿಸಿಕೊಂಡು ಪ್ರತಿದಿನವೂ ಆಹಾರದಲ್ಲಿ ಸೇವಿಸಬೇಕು.

ದೇಹದ ತೂಕ ಕಡಿಮೆಯಾಗುವುದರ ಜತೆಗೆ ಆಹಾರದ ರುಚಿಯು ಹೆಚ್ಚುತ್ತದೆ.

**ಮೊಡವೆ, ಚರ್ಮದ ಕಲೆ ನಿವಾರಣೆಗೆ:**

ಕರಿಬೇವಿನ ಸೊಪ್ಪನ್ನು ಗಂಧದ ಪೇಸ್ಟ್‌ನಂತೆ ಅರೆದು ನಿಂಬೆಹಣ್ಣಿನ ರಸದಲ್ಲಿ ಮಿಶ್ರಣ ಮಾಡಿ ಮೊಡವೆ, ಚರ್ಮದ ಕಲೆ, ಚಿಬ್ಬು ಉಂಟಾಗಿರುವ ಜಾಗಕ್ಕೆ ಲೇಪನ ಮಾಡಬೇಕು. ಎರಡು ಗಂಟೆ ನಂತರ ಬಿಸಿ ನೀರಿನಿಂದ ತೊಳೆದುಕೊಳ್ಳಬೇಕು ಇಲ್ಲವೆ ರಾತ್ರಿ ಮಲಗುವಾಗ ಲೇಪನ ಮಾಡಿಕೊಂಡು ಬೆಳಿಗ್ಗೆ ಸ್ನಾನದ ವೇಳೆ ಮುಖ, ಮೈಗೆಲ್ಲ ತಿಕ್ಕಿ ತೊಳೆದುಕೊಂಡರೆ ಉತ್ತಮ ಪರಿಣಾಮ ನಿರೀಕ್ಷಿಸಬಹುದು.

## ಕರ್ಪೂರ



ಕರ್ಪೂರವು ಒಂದು ಮೇಣದಂಥ, ಸುಡುವ, ಬಿಳಿ ಅಥವಾ ಪಾರದರ್ಶಕವಾದ ಘನರೂಪವಾಗಿದೆ.

ಕರ್ಪೂರದಲ್ಲಿ ಈಶಾವಾಸ ಕರ್ಪೂರ, ಹಿಮ–ಕರ್ಪೂರ, ಪೋತಾಶ್ರಯ ಕರ್ಪೂರ, ಉದಯ ಭಾಸ್ಕರ ಕರ್ಪೂರ, ಸ್ವರ್ಣ ಕರ್ಪೂರ, ಹುಳಿ ಕರ್ಪೂರ ಎಂದು ಹಲವು ಬಗೆಯ ಕರ್ಪೂರ ಗಳುಂಟು. ಪಚ್ಚ ಕರ್ಪೂರವೂ ಈ ವರ್ಗಕ್ಕೆ ಸೇರಿದ್ದಾಗಿದೆ.

ಕರ್ಪೂರದ ಮರಗಳು ಚೀನಾ ಮತ್ತು ಜಪಾನ್ ದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತವೆ. ಈ ಮರದ ಫಲಗಳ ಮಧ್ಯಭಾಗದಲ್ಲಿ ಸುಗಂಧಭರಿತ ತಿರುಳಿರುತ್ತದೆ. ಕಾಂಡದಲ್ಲಿ ಅಂಟಿನಂತಹ ಹಾಲು ಬರುತ್ತದೆ. ಈ ಅಂಟಿನ ಹಾಲಿನಿಂದ ಕರ್ಪೂರವನ್ನು ತಯಾರಿಸುತ್ತಾರೆ. ಭಾರತದಲ್ಲಿ ಕೆಲವು ಕಡೆ ಮಾತ್ರ ಕರ್ಪೂರದ ಗಿಡಗಳು ಬೆಳೆಯುತ್ತವೆ.

ಸಾಮಾನ್ಯ ಕರ್ಪೂರವು ಸುಗಂಧ ಭರಿತವೂ, ಶೀತಲವೂ ಆಗಿದೆ. ಕಫ, ರಕ್ತ, ಪಿತ್ತ, ಕಂಠದೋಷ, ನೇತ್ರರೋಗಗಳನ್ನು ನಿವಾರಿಸುತ್ತದೆ. ಕರ್ಪೂರದಿಂದ ತಯಾರಿಸುವ ತೈಲ ಲೇಪನದಿಂದ ದೇಹದ ಹಲವು ಬಗೆಯ ನೋವುಗಳು ನಿವಾರಣೆಯಾಗುತ್ತವೆ.

ಅಲ್ಲದೇ ಕರ್ಪೂರವು ಪ್ರತಿದಿನದ ಪ್ರಾರ್ಥನೆಯ ಸಮಯದ ಒಂದು ಭಾಗವಾಗಿದೆಯಲ್ಲದೆ ಮನೆಗಳನ್ನು ಶುದ್ಧೀಕರಿಸುತ್ತದೆ ಮತ್ತು ದುಷ್ಟ ಶಕ್ತಿಗಳನ್ನು ಹಾಗೂ ನಕಾರಾತ್ಮಕ ಶಕ್ತಿಯನ್ನು ದೂರ ಇಡುತ್ತದೆಯೆಂದು ಕೂಡ ನಂಬಲಾಗಿದೆ.

ಅಷ್ಟೇ ಅಲ್ಲದೆ ಮನೆಯಲ್ಲಿ ಇರುವೆಗಳ ಸಮಸ್ಯೆ ಇದ್ದರೆ ಕರ್ಪೂರವನ್ನು ನೀರಿನಲ್ಲಿ ಕರಗಿಸಿ, ಆ ನೀರನ್ನು ಇರುವೆಗಳು ಇರುವ ಪ್ರದೇಶದಲ್ಲಿ ಸಿಂಪಡಿಸುವುದರಿಂದ ಇರುವೆಗಳು ತಕ್ಷಣವೇ ಕಣ್ಮರೆಯಾಗುವುದಲ್ಲದೇ, ತೆಳುವಾದ ಹತ್ತಿ ಬಟ್ಟೆಯಲ್ಲಿ ಕರ್ಪೂರವನ್ನು ಇರಿಸಿ, ಹಾಸಿಗೆ ನಡುವೆ ಇಡುವುದರಿಂದ ತಿಗಣೆಗಳ ಕಾಟವು ಸಹ ನಿವಾರಣೆಯಾಗುತ್ತದೆ.

**ದಿನಾಂಕ 15–08–2018 ರಂದು ಬೆವಿಕಂನ ನಿಗಮ ಕಚೇರಿಯಲ್ಲಿ ಸ್ವಾತಂತ್ರ್ಯ ದಿನೋತ್ಸವವನ್ನು ಆಚರಿಸಲಾಯಿತು. ಅದೇ ಸಂದರ್ಭದಲ್ಲಿ ಬೆಳಕು ಭವನದ 5ನೇ ಅಂತಸ್ತಿನಲ್ಲಿರುವ ಹೊಸ ಕ್ರೀಡಾ ಸಭಾಂಗಣವನ್ನು ಉದ್ಘಾಟಿಸಲಾಯಿತು.**




















## ಸಂಪಾದಕ ಮಂಡಳಿ

| | |
|---|---|
| **ಶ್ರೀಮತಿ ಸಿ. ಶಿಖಾ** ವ್ಯವಸ್ಥಾಪಕ ನಿರ್ದೇಶಕರು | **ಅಧ್ಯಕ್ಷರು** |
| **ಶ್ರೀ ಡಾ. ಆರ್.ಸಿ. ಚೇತನ್** ನಿರ್ದೇಶಕರು (ಹಣಕಾಸು) | **ಮುಖ್ಯ ಸಂಪಾದಕರು** |
| **ಶ್ರೀ ಅಶೋಕ್ ಕುಮಾರ್ .ಜಿ** ನಿರ್ದೇಶಕರು (ತಾಂತ್ರಿಕ) | **ಮುಖ್ಯ ಸಂಪಾದಕರು** |
| **ಶ್ರೀಮತಿ ಜಿ. ಶೀಲಾ** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) | **ಸಂಪಾದಕರು** |
| **ಶ್ರೀ ಎಸ್.ಕೆ. ನಾಗರಾಜ್,** ನಿಗಮ ವ್ಯವಹಾರ (ಹಿರಿಯ ಸಹಾಯಕ) | **ಉಪ ಸಂಚಾಲಕರು** |
| **ಶ್ರೀ ಕೆ. ಬಲರಾಮ್,** ಪ್ರಧಾನ ಕಾರ್ಯದರ್ಶಿ,ಕವಿಪ್ರನಿನಿ ನೌಕರರ ಸಂಘ | **ಸದಸ್ಯರು** |
| **ಶ್ರೀ ಎನ್. ಪ್ರಕಾಶ್ ಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಎಚ್.ಆರ್. ರಾಜಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪ.ಜಾತಿ ಮತ್ತು ಪ.ಪಂಗಡ ಕ್ಷೇಮಾಭಿವೃದ್ಧಿ ಸಂಘ | **ಸದಸ್ಯರು** |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ/ಎಸ್ಕಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಕುಮಾರ್ ಮುದ್ದವ್ವನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇ. ಸಂಘ | **ಸದಸ್ಯರು** |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ

ವಿಳಾಸ: **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.),ನಿಗಮ ಕಾರ್ಯಾಲಯ, ಬಿ.ವಿ.ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**
ಇಮೇಲ್ ವಿಳಾಸ: **gmcr@bescom.co.in**

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**
**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**

Printed at : Poornima Printers, Ph. 080 - 23359588